


ನಿನ್ನೆ ಮೊನ್ನೆಯವರೆಗೆ ಈ ಮನೆ, ಇದರ ಪರಿಸರ ಹೇಗಿತ್ತು ಅಂದರೆ ತಣ್ಣಗಿನ ಮೌನದಲ್ಲಿ ಅದ್ದಿ ತೆಗೆದಿಟ್ಟಂತೆ. ಮನೆಯಲ್ಲಿರುವ ಎರಡೂ ಮತ್ತೊಂದು ಜನ ತಮ್ಮ ಪಾಡಿಗೆ ತಾವು ತಮ್ಮ ಕೆಲಸದಲ್ಲಿ ವ್ಯಸ್ತರಾಗಿರುತ್ತಿದ್ದರು. ಪಾತ್ರೆ ಬೆಳಗುವಾಗಲೋ, ಬಟ್ಟೆ ಒಗೆಯುವಾಗಲೋ, ಕಸ ಗುಡಿಸುವಾಗಲೋ ಆಗೀಗ ಮೌನ ಕದಡುತ್ತಿದ್ದುದು ಬಿಟ್ಟರೆ ಮತ್ತೆ ಇಡೀ ಮನೆ ಪ್ರಶಾಂತ. ಹೆಸರಿಗೆ ಟೀವಿ ಇತ್ತಾದರೂ ಆ ಹಳ್ಳಿಮನೆಯಲ್ಲಿ ಕರೆಂಟು ಇರುತ್ತಿದ್ದುದು ಕಮ್ಮಿ. ಅದರಲ್ಲೂ ಬೇಕಾದಾಗ ಹಟ ಹಿಡಿದು ಮುರಿತು ಕೂತಂತೆ ಕೈ ಕೊಡುತ್ತಿತ್ತು ಕರೆಂಟು. ಹಾಗಾಗಿ ಮನೆಯವರು ಧಾರಾವಾಹಿಗೆ ಅಂಟಿಕೊಂಡವರೇನಲ್ಲ. ರಾತ್ರಿ ಮಲಗುವ ಮುಂಚೆ ಏನಾದರೂ ನೋಡಿದರೂ ಆಯ್ತು, ಬಿಟ್ಟರೂ ಆಯ್ತು. ವಾಸ್ತವವಾಗಿ ಮೂರು ಜನ ಎಂದು ಲೆಕ್ಕಕ್ಕೆ ಹೇಳಿದರೂ ಮನೆ ಯಜಮಾನ ವೆಂಕಟೇಶ ಮನೆಯೊಳಗಿರುತ್ತಿದ್ದುದು ಕಮ್ಮಿ. ತೋಟ, ಗದ್ದೆ ಎಂದು ಬೆಳಗಿನ ತಿಂಡಿ ಮುಗಿಸಿ ಹೊರಟರೆ ಮಧ್ಯಾಹ್ನ ಊಟದ ಹೊತ್ತಿಗೆ ಸವಾರಿ ಮನೆಗೆ ಬರುತ್ತಿತ್ತು. ಜಮೀನಿನ ಕೆಲಸ ಇಲ್ಲದಿದ್ದರೆ ಪೇಟೆಯ ಕಡೆ ಸರ್ಕೀಟು ಹೋಗಿಬರಲು ಏನಾದರೂ ನೆಪ ಇದ್ದೇ ಇರುತ್ತಿತ್ತು. ಇವನು ಪೇಟೆಗೆ ಹೊರಟಿದ್ದರಿಂದ ಮನೆಗೆ ಏನಾದರೂ ಅಗತ್ಯ ವಸ್ತು ಬೇಕಾಯ್ತೋ, ಅಥವಾ ಅಗತ್ಯ ವಸ್ತು ಬೇಕಾಗಿದ್ದರಿಂದ ಇವನು ಪೇಟೆಗೆ ಹೊರಟಿದ್ದೋ ಅರ್ಥವಾಗದಷ್ಟು ಒಂದಕ್ಕೊಂದು ತಳುಕು ಹಾಕಿಕೊಂಡಿರುತ್ತಿದ್ದುವು. ಹೆಚ್ಚುಪಕ್ಷ ಮನೆಯೊಳಗೆ ಅತ್ತೆ, ಸೊಸೆ ಇಬ್ಬರೇ. ದಿವಸಾ ಮಾತಾಡುವುದಕ್ಕೆ ಏನಿರುತ್ತದೆ? ಎಷ್ಟಿರುತ್ತದೆ? ಮನೆಮಗಳು ಅಪರೂಪಕ್ಕೆ ಬಂದಾಗಲೂ ಒಂದೆರಡು ದಿನ ಮಾತು ಮಾತು ಮಾತು. ಮರದ ಬಾಯಾಗಿದ್ದರೆ ಒಡೆದು ಹೋಗುತ್ತಿತ್ತು ಅನ್ನುವಷ್ಟು ಮಾತು. ಆಮೇಲೆ ಸರಕು ಖಾಲಿಯಾದಂತೆ ಮಾತಿಗೆ ಕಡಿವಾಣ ಬೀಳುತ್ತಿತ್ತು. ಸೊಸೆಯ ಕಣ್ಣಮರೆಯಲ್ಲಿ ಅಮ್ಮ, ಮಗಳು ಮಾತಾಡುವುದಿತ್ತಾದರೂ ಅದು ಮಗಳಿಗೆ ಪಥ್ಯವಾಗುತ್ತಿರಲಿಲ್ಲ. ಯಶೋದಮ್ಮನ ಸೊಸೆ ಅವರ ಖಾಸಾ ಅಣ್ಣನ ಮಗಳು. ಸೋದರಿಕೆ ಸಂಬಂಧ. ಬಯಸಿ ಬಯಸಿ ಈ ಸಂಬಂಧ ಹೊಂದಿಸಿಕೊಳ್ಳಲು